**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 313/2015**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿ.ಡಬ್ಲ್ಯೂ.01**

**ದಿನಾಂಕಃ 20.11.2024**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದಃ**

ನಿಮ್ಮ ಕೈಯಲ್ಲಿರುವ ಹಾಳೆಯನ್ನು ಕೊಡಿ ಎಂದು ಕೇಳಿದ್ದಕ್ಕೆ ಸಾಕ್ಷಿಯು ಅದು ನನ್ನ ವ್ಯಯಕ್ತಿಯ ದಾಖಲೆ ಎಂದು ನುಡಿದು, ಅದನ್ನು ಬದಿಗಿಟ್ಟಿರುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯದ ಅವಗಾಹನೆಗೆ ಸಾಕ್ಷಿ ತೋರಿಸಿದ್ದು, ಸದರಿ ದಾಖಲೆಗಳು ಪ್ರಕರಣಕ್ಕೆ ಸಂಬಂಧಿಸಿದ ಕೆಲವು ಅಂಶಗಳ ಬಗ್ಗೆ ಸಾಕ್ಷಿಯು ಮಾಡಿಕೊಂಡ ಟಿಪ್ಪಣಿ, ಎಲ್.ಐ.ಸಿ. ಅರ್ಜಿ, ಟೌನ್ ಪಿ ಎಸ್ ಹರಿಹರರವರಿಗೆ ಸಲ್ಲಿಸಿದ ಒಂದು ಪತ್ರ ಮತ್ತು ಈ ಪ್ರಕರಣದ ಎಫ್ ಐ ಆರ್ ಇರುತ್ತವೆ, ಅವುಗಳನ್ನು ಸಾಕ್ಷಿಗೆ ಮರಳಿ ಹಿಂತಿರಿಗಿಸಲಾಗಿರುತ್ತದೆ. ಸದರಿ ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದಂತಹ ದಾಖಲೆಗಳು ಆಗಿದ್ದರೂ ಸಹ ನೀವು ನ್ಯಾಯಾಲಯದ ಮುಂದೆ ಅವು ನನ್ನ ವ್ಯಯಕ್ತಿಕ ದಾಖಲೆಗಳು ಎಂದು ಸುಳ್ಳು ಹೇಳಿದ್ದೀರಿ ಎಂದರೆ ಸಾಕ್ಷಿಯು ಅವು ನನ್ನ ವ್ಯಯಕ್ತಿಕ ಉಪಯೋಗಕ್ಕೆ ಬೇಕಾಗಿರುವ ದಾಖಲೆಗಳು ಎಂದು ನುಡಿಯುತ್ತಾರೆ. ನಾವು ಮತ್ತು ನಮ್ಮ ವಿಭಾಗಿಯ ಕಛೇರಿ ಅಧಿಕಾರಿಗಳೆಲ್ಲರೂ ಈ ಪ್ರಕರಣವನ್ನು ಮೇಲ್ವಿಚಾರಣೆ ಮಾಡುತ್ತಿದ್ದೇವೆ ಎಂದರೆ ಸರಿ. ನೀವು ಈ ಪ್ರಕರಣದಲ್ಲಿ ಎಷ್ಟು ಬಾರಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹಾಜರಾಗಿದ್ದೀರಾ ಎಂದರೆ ಸಾಕ್ಷಿಯು ನಾನು ಯಾವತ್ತಿಗೂ ಹಾಜರಾಗಿಲ್ಲ, ಅದಕ್ಕೆಂದು ನಮ್ಮ ಕಛೇರಿಯ ಅಧಿಕಾರಿಯಾದ ಚಾಸಾ.4 ರವರನ್ನು ನೇಮಕ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ಯಾವುದೇ ಪೊಲೀಸ್ ಅಧಿಕಾರಿ ಯಾವತ್ತಿಗೂ ನನ್ನನ್ನು ವಿಚಾರಣೆ ಮಾಡಿಲ್ಲ. ಈ ಪ್ರಕಣದಲ್ಲಿ ನಾನು ಚಾಸಾ.4 ರವರಿಗೆ ನೀಡಿದ ನಿಪಿ-1 ಹೊರತುಪಡಿಸಿ, ಬೇರೆ ಯಾವುದೇ ಮಾಹಿತಿಯನ್ನು ನಾನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿ. ನಾನು ಎಲ್ ಐ ಸಿ ಯ ಮೈಕ್ರೋ ಇನ್ಸೂರೆನ್ಸ್ ವಿಭಾಗದ ಮುಖ್ಯ ಅಧಿಕಾರಿ ಎಂದರೆ ಸರಿ. ಸದರಿ ಮೈಕ್ರೋ ಇನ್ಸೂರೆನ್ಸ ಬಗ್ಗೆ ಮಾಹಿತಿಯನ್ನು ನೀಡಬಲ್ಲಿರಾ? ಎಂದರೆ ಸಾಕ್ಷಿಯು, "ದಿ ಮೈಕ್ರೋ ಇನ್ಸೂರೆನ್ಸ ಏಜೆನ್ಸಿಗಳು ನಮ್ಮ ವಲಯಾಧಿಕಾರಿಗಳಿಂದ ನೇಮಕಗೊಳ್ಳುತ್ತವೆ. ಅದೇ ರೀತಿ ಈ ಮೈಕ್ರೋ ಇನ್ಸೂರೆನ್ಸ ಗಳನ್ನು ಕೆಲವು ಎನ್ ಜಿ ಓ ಮತ್ತು ಸಂಸ್ಥೆಗಳಿಗೂ ಸಹ ನಡೆಸಲು ನೇಮಕ ಮಾಡುತ್ತೇವೆ. ಈ ಎನ್ ಜಿ ಓ ಮತ್ತು ಸಂಸ್ಥೆಗಳನ್ನು ನೇಮಕ ಮಾಡಲು ಕೆಲವು ನಿಯಮಗಳನ್ನು ಹೊಂದಿರುತ್ತವೆ, ಅವುಗಳೆಂದರೆ 1. ಅಂತಹ ಎನ್ ಜಿ ಓ ಅಥವಾ ಸಂಸ್ಥೆಗಳು ಕೆಲಸಗಾರರನ್ನು ನೇಮಿಸಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು. 2. ಸಂಸ್ಥೆ ಮತ್ತು ಎನ್ ಜಿ ಓ ನೋಂದಾವಣೆ ಹೊಂದಿರಬೇಕು. 3. ಅಂತಹ ಸಂಸ್ಥೆ ಮತ್ತು ಎನ್ ಜಿ ಓ ಗಳು ಬೇರೆ ಸಂಸ್ಥೆ ಮತ್ತು ಎನ್ ಜಿ ಓ ಗಳೊಂದಿಗೆ ಹೊಂದಾಣಿಕೆ ಹೊಂದಿರಬೇಕು. 4. ಸದರಿ ಸಂಸ್ಥೆ ಮತ್ತು ಎನ್ ಜಿ ಓಗಳು ಸುಆರ್ಥಿಕ ಸ್ಥಿತಿ ಹೊಂದಿರಬೇಕು."

ಎಂದು ನುಡಿಯುತ್ತಾರೆ.

ನಾವು ಯಾವುದೇ ಒಂದು ಸಂಸ್ಥೆ ಮತ್ತು ಎನ್ ಜಿ ಓ ಮೈಕ್ರೋ ಇನ್ಸೂರೆನ್ಸನ ಏಜೆಂಟರಾಗಿ ನೇಮಕ ಮಾಡಲು ಬ್ಯಾಂಕ್ ದಾಖಲೆಗಳು, ಇಂಡೆಮಿನಿಟಿ ಬಾಂಡ್ಸ್ ಮತ್ತು ಹಣವನ್ನು ಸಂದಾಯ ಮಾಡುವ ಸಾಮರ್ಥ್ಯ ಹಾಗೂ ಹಣವನ್ನು ವಸೂಲಿ ಮಾಡುವ ಸಾಮರ್ಥವನ್ನು ನೋಡಿ ನೇಮಕ ಮಾಡುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನೇಮಕ ಮಾಡುವ ಅಧಿಕಾರಿ ಅಲ್ಲ, ಅದರ ಬಗ್ಗೆ ದಾಖಲೆಗಳನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಅಂತಹ ಮಧ್ಯವರ್ತಿ ಸಂಸ್ಥೆ ಮತ್ತು ಎನ್ ಜಿ ಓ ಗಳು ಗ್ರಾಹಕರಿಂದ ಪಡೆದ ಎಲ್ ಐ ಸಿ ಪ್ರೀಮಿಯಂ ಹಣವನ್ನು ನಮ್ಮ ಮುಖ್ಯ ಕಛೇರಿಗೆ ಹಣ ಸಂದಾಯ ಮಾಡದೇ ಇದ್ದಾಗ ಅದನ್ನು ನಾವು ಅಂತಹ ಮಧ್ಯವರ್ತಿ ಸಂಸ್ಥೆ ಮತ್ತು ಎನ್ ಜಿ ಓ ಗಳು ಭದ್ರತೆಗೆ ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ ಕಾನೂನಿನ ರೀತಿಯಲ್ಲಿ ವಸೂಲಿ ಮಾಡಬಹುದು ಎಂದರೆ ಸರಿ. ಈ ಪ್ರಕರಣದಲ್ಲಿ ನಾವು ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯವರ ವಿರುದ್ಧ ವಸೂಲಾತಿಗಾಗಿ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ನಿಪಿ–1 ನ್ನು ಚಾಸಾ.4 ರವರ ಮೂಲಕ ಠಾಣೆಗೆ ಸಲ್ಲಿಸುವ ಪೂರ್ವದಲ್ಲಿ ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯವರು ಏಜೆನ್ಸಿ ಪಡೆಯಲು ನಮ್ಮ ಜೋನಲ್ ಗೆ ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿಲ್ಲ. ಈ ದಾಖಲಾತಿಗಳನ್ನು ಪರಿಶೀಲಿಸದೇ ನಿಪಿ–1 ರಂತೆ ಪೊಲೀಸ್ ಠಾಣೆಯಲ್ಲಿ ಮಾಹಿತಿ ನೀಡಿರುವುದು ತಪ್ಪು ಎಂದರೆ ಸರಿ. ಸಾಕ್ಷಿ ಮುಂದುವರೆದು, ನನ್ನ ಮೇಲಾಧಿಕಾರಿಗಳು ನನಗೆ ಆದೇಶ ನೀಡಿದ್ದರಿಂದ ನಿಪಿ–1 ನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ–1 ರಲ್ಲಿ ಯಾವ ಮೇಲಾಧಿಕಾರಿ ನನಗೆ ನಿರ್ದೇಶನ ನೀಡಿದ್ದರು ಎಂದು ನಿಪಿ–1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ವಲಯ(ಜೋನಲ್) ಕಛೇರಿಯಿಂದ ನಿರ್ದೇಶನ ಬಂದಿತ್ತು ಎಂದು ನುಡಿಯುತ್ತಾರೆ. ನಾನು ನಿಪಿ–1 ನ್ನು ಚಾಸಾ.4 ರವರ ಮೂಲಕ ಠಾಣೆಗೆ ಹಾಜರುಪಡಿಸಿದ ವಲಯ(ಜೋನಲ್) ಕಛೇರಿಯಿಂದ ಯಾವುದೇ ಲಿಖಿತ ನಿರ್ದೇಶನವನ್ನು ಪಡೆದಿಲ್ಲ. ನಿಪಿ–1 ನ್ನು ಪೊಲೀಸ್ ಠಾಣೆಗೆ ಹಾಜರುಪಡಿಸುವ ಪೂರ್ವದಲ್ಲಿ ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯವರ ಪರವಾಗಿ ಯಾರು ಮೈಕ್ರೋ ಇನ್ಸೂರೆನ್ಸ ಏಜೆನ್ಸಿಯನ್ನು ಪಡೆದಿದ್ದರು ಎಂದು ದಾಖಲಾತಿಗಳನ್ನು ಕಛೇರಿಯಿಂದ ಪಡೆದು ಪರಿಶೀಲಿಸಿರುತ್ತೇನೆ. ಅಂತಹ ದಾಖಲೆಗಳನ್ನು ನಿಪಿ–1 ರೊಂದಿಗೆ ನಾನು ಸಲ್ಲಿಸಿಲ್ಲ. ಸಾಕ್ಷಿ ಮುಂದುವರೆದು, ನಮ್ಮ ಮ್ಯಾನೇಜರ್ ಚಾಸಾ.4 ರವರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪ್ರಾಸಿಕ್ಯೂಷನ್ ಪರ ಗುರುತಿಸಿದ ದಾಖಲಾತಿಗಳನ್ನು ತೋರಿಸಲಾಗಿ, ಅದರಲ್ಲಿ ಅಂತಹ ದಾಖಲಾತಿಗಳು ಇಲ್ಲ ಎಂದು ನುಡಿಯುತ್ತಾರೆ. ನಿಪಿ–1 ನ್ನು ನೀಡುವ ಸಂದರ್ಭದಲ್ಲಿ ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ಎಷ್ಟು ಜನ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿದ್ದರು ಎಂದು ನಾನು ವಿಚಾರಣೆ ಮಾಡಿಲ್ಲ. ಅದೇ ರೀತಿ ನಿಪಿ–1 ನ್ನು ನೀಡುವ ಪೂರ್ವದಲ್ಲಿ ಸದರಿ ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ

ಸಂಸ್ಥೆಯ ಯಾವ ನಿರ್ದೇಶಕರ ಮೇಲೆ ಸಂಪೂರ್ಣ ಜವಾಬ್ದಾರಿ ಇತ್ತು ಎಂದು ನಾನು ದಾಖಲಾತಿಗಳನ್ನು ಪರಿಶೀಲಿಸಿಲ್ಲ. ನಿಪಿ–1 ರೊಂದಿಗೆ ಸದರಿ ಸಂಸ್ಥೆಯ ಬೈಲಾ ಪುಸ್ತಕ, ನೋಂದಣಿ ಪ್ರಮಾಣ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಚಾಸಾ.4 ರವರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಎಷ್ಟು ಜನರು ಪಾಲಿಸಿಗಳನ್ನು ಎಷ್ಟು ಮೊತ್ತಕ್ಕೆ ಮಾಡಿಸಿರುತ್ತಾರೆ ಮತ್ತು ಯಾರದ್ದು ಎಷ್ಟು ಹಣ ದುರುಪಯೋಗವಾಗಿದೆ ಎಂದು ನಿಮಗೆ ಖುದ್ದು ಮಾಹಿತಿ ಇದೆಯಾ? ಎಂದರೆ ಸಾಕ್ಷಿಯು ನಾನು ದಾಖಲೆಗಳನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು, 5000 ಕ್ಕಿಂತ ಹೆಚ್ಚು ಪಾಲಿಸಿಗಳು ಇದ್ದವು ಎಂದು ನುಡಿಯುತ್ತಾರೆ. ನಾನು "ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ------------- ದೂರನ್ನು ಕೊಟ್ಟಿರುತ್ತೇನೆ" ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಡಿ–1 ಎಂದು ಗುರುತಿಸಲಾಯಿತು. ನಾನು "ಜಯಶ್ರೀ ಟಾಕೀಸ್ ಎದುರುಗೆ ಇರುವ ------------- ದೂರು ನೀಡಿದ್ದೇನು" ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಡಿ–2 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆಯಲ್ಲಿ ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕರಾಗಿದ್ದ ಆರೋಪಿ ನಿಂಗರಾಜುರವರನ್ನು ನಮ್ಮ ಎಲ್.ಐ.ಸಿ. ಮೈಕ್ರೋ ಇನ್ಸೂರೆನ್ಸ ಏಜೆಂಟರಾಗಿ ನೇಮಿಸಿರುತ್ತಾರೆ ಎಂದು ಹೇಳಿದ್ದು ಆ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಫ್ರಾಸಿಕ್ಯೂಷನ್ ದಾಖಲಾತಿಗಳನ್ನು ತೋರಿಸಲಾಗಿ ಅದರಲ್ಲಿ ಅಂತಹ ಯಾವುದೇ ದಾಖಲಾತಿ ಇಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿ ಲಿಂಗರಾಜ ಎಲ್ ಐ ಸಿ ಪ್ರೀಮಿಯಂ ಹಣವನ್ನು ಪಡೆಯಲು ಕೆಲವು ವ್ಯಕ್ತಿಗಳನ್ನು ನೇಮಕ ಮಾಡಿದ್ದರು ಎಂದು ಹೇಳಿದ್ದು ಸದರಿ ವ್ಯಕ್ತಿಗಳನ್ನು ನೇಮಕಾತಿಯ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಸದರಿ ವ್ಯಕ್ತಿಗಳು ತಾವು ಪಡೆದ ಹಣವನ್ನು ಆರೋಪಿ ಲಿಂಗರಾಜ ರವರಿಗೆ ನೀಡಿದ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿಲ್ಲ. 12 ಜನ ಆರೋಪಿಯ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದು ಹೇಳಿದ್ದು ಸದರಿ ಸಂದರ್ಭದಲ್ಲಿ ಅವರ ದಾಖಲಾತಿಗಳನ್ನು ನಮ್ಮ ಕಚೇರಿಯ ದಾಖಲಾತಿಗಳಿಗೆ ಹೊಂದಾಣಿಕೆ ಮಾಡಿ ನೋಡಿರುತ್ತೇವೆ. ನಾನು ಒಬ್ಬ ಆಡಿಟರ್ ಅಲ್ಲ ಎಂದರೆ ಸರಿ. ಸಾಮಾನ್ಯವಾಗಿ ಹಣ ದುರುಪಯೋಗ ಆದ ಬಗ್ಗೆ ದೂರುಗಳು ಬಂದಲ್ಲಿ ಅದಕ್ಕೆ ಸಂಬಂದಿಸಿದಂತೆ ನಮ್ಮ ಲೆಕ್ಕ ಪರಿಶೋಧನಾ ವಿಭಾಗದಲ್ಲಿ ಅದನ್ನು ಪರಿಶೀಲಿಸಲಾಗುತ್ತದೆ ಎಂದರೆ ಸರಿ. ಈ ರೀತಿ ಲೆಕ್ಕ ಪರಿಶೀಲನೆ ಮಾಡಿದ ವ್ಯಕ್ತಿಯ ಹೆಸರನ್ನು ನಿಪಿ.1 ರಲ್ಲಿ ನಮೂದಿಸಿಲ್ಲ ಎಂದರೆ

ಸರಿ. ನಿಸಿ. 4 ಮತ್ತು ನಿಪಿ.14,19,22 ಮತ್ತು 42 ಏನು ದಾಖಲೆ ಎಂದರೆ ಸಾಕ್ಷಿಯು ಅವು ಕನ್ನಡದಲ್ಲಿರುವುದರಿಂದ ನನಗೆ ಕನ್ನಡ ಭಾಷೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವತ್ತಿಗೂ ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಬೇಟಿ ನೀಡಿಲ್ಲ. ನಿಪಿ.14 ನ್ನು ನನ್ನ ಸಂಸ್ಥೆಯಲ್ಲಿ ನೋಡಿರಬಹುದು ಆದರೆ ಯಾವಾಗ ಎಂದು ನನಗೆ ನೆನಪಿಲ್ಲ. ನಿಪಿ.15 (23 ಪಾಸ್ ಬುಕ್ ಗಳು) ನಮ್ಮ ಎಲ್ ಐ ಸಿ ಕಚೇರಿ ನೀಡಿದ ಪಾಸ್ ಬುಕ್ ಗಳು ಎಂದರೆ ಸರಿ. ಸದರಿ ಪಾಸ್ ಬುಕ್ ಗಳು ಪಾಲಿಸಿ ಹೋಲ್ಡರ ಗೆ ನೀಡಿದ ಪಾಸ್ ಬುಕ್ ಗಳು ಎಂದರೆ ಸರಿ. ಅದೇ ರೀತಿ ಈ ಪ್ರಕರಣದಲ್ಲಿನ ಗುರುತಿಸಲಾದ ಎಲ್ಲಾ ಪಾಸ್ ಬುಕ್ ಗಳು ಪಾಲಿಸಿ ಹೋಲ್ಡರ್ ರವರಿಗೆ ನೀಡಿದ ಪಾಸ್ ಬುಕ್ ಗಳು ಎಂದರೆ ಸರಿ. ಈ ಪ್ರಕರಣದಲ್ಲಿ ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯವರು ಹಣವನ್ನು ಪಡೆದು ರಶೀದಿ ನೀಡಿದ ಬಗ್ಗೆ ನಾನು ದಾಖಲಾತಿಗಳನ್ನು ನೋಡಿದ್ದೇನೆ. ಅಂತಹ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರಾ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಎಲ್ಲಾ ಪಾಸ್ ಬುಕ್ ಗಳಲ್ಲಿ ಅದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳ ಸಹಿ ಮತ್ತು ಸೀಲ್ ಇರಬೇಕಾಗುತ್ತದೆ ಎಂದರೆ ಸರಿ. ನಾನು ಪ್ರತಿ ಪಾಲಿಸಿ ಹೋಲ್ಡರ್ ರವರ ಪಾಸ್ ಬುಕ್ ಗಳನ್ನು ಪರಿಶೀಲನೆ ಮಾಡಿದ್ದೇನೆ. ಪಾಲಿಸಿ ಹೋಲ್ಡರ್ ತಾನೇ ಅಥವಾ ಬೇರೆಯವರಿಂದ ಅದರಲ್ಲಿ ಹಣದ ಮೊತ್ತವನ್ನು ನಮೂದಿಸಿ ಬೇರೆಯವರಿಂದ ಸಹಿ ಪಡೆಯುವ ಸಾಧ್ಯತೆ ಇದೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿದ ಪಾಸ್ ಬುಕ್ ಗಳಲ್ಲಿ ಮೊತ್ತವನ್ನು ನಮೂದಿಸಿರುವವರ ವಿಚಾರಣೆ ಮಾಡಿರುತ್ತೇನೆ ಮತ್ತು ಅವರ ಹೆಸರುಗಳನ್ನು ಸಹ ನಿಪಿ.1 ರಲ್ಲಿ ಹೇಳಿರುತ್ತೇನೆ. ಈ ಪ್ರಕರಣದಲ್ಲಿ ಸಲ್ಲಿಸಿರುವ ಪಾಸ್ ಬುಕ್ ಗಳಲ್ಲಿ ಹಣ ಪಡೆದು ಸಹಿ ಮಾಡಿರುವ ವ್ಯಕ್ತಿಗಳ ಹೆಸರುಗಳನ್ನು ಹೇಳಲು ಬರುವುದಿಲ್ಲ. ಸದರಿ ಪಾಸ್ ಬುಕ್ ಗಳಲ್ಲಿ ಆರೋಪಿ ಲಿಂಗರಾಜು ರವರ ಸಹಿ ಇಲ್ಲ ಎಂದರೆ ಸರಿ. ಚಾಸಾ.6 ರಿಂದ 17 ರವರು ಹಣ ಪಡೆದು ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಕಟ್ಟದೇ ಇರುವಂತಹ ಸಾಧ್ಯತೆ ಇದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ 12 ವ್ಯಕ್ತಿಗಳು ಪಾಲಿಸಿದಾರರಿಂದ ಹಣ ಪಡೆದಿರುತ್ತಾರೆ ಎಂದು ಹೇಳಿದ್ದು ಅವರು ಚಾಸಾ.6 ರಿಂದ 17 ರವರು ಎಂದರೆ ಸರಿ. ಸದರಿ 12 ಜನರು ಆರೋಪಿ ಲಿಂಗರಾಜರವರಿಗೆ ಹಣ ಸಂದಾಯ ಮಾಡಿದ ಬಗ್ಗೆ ವಿಚಾರಣೆ ಮಾಡಿ ಯಾವುದಾದರೂ ದಾಖಲೆ ಪಡೆದಿದ್ದೀರಾ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿ ಲಿಂಗರಾಜು 11,72,000/- ಗಳನ್ನು ಸಂದಾಯ ಮಾಡಿದ್ದು ಲಿಂಗರಾಜ ರವರು ಸದರಿ ಹಣದಲ್ಲಿ 4,29,000/- ರೂಗಳನ್ನು ಮಾತ್ರ ಕಚೇರಿಗೆ ಸಂದಾಯ ಮಾಡಿರುತ್ತಾರೆ ಎಂದು ಹೇಳಿದ್ದು, ನಿಪಿ.1 ರಲ್ಲಿ ಈ ಸಂಗತಿಗಳನ್ನು ಹೇಳಿದ್ದೀರಾ ಎಂದರೆ ಸಾಕ್ಷಿಯು ಅದರ ಬಗ್ಗೆ ನಿಪಿ.1 ನ್ನು ದಾಖಲಿಸಿದ ನಂತರದಲ್ಲಿ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಹಾಗಾದರೆ ನಿಪಿ.1 ರಲ್ಲಿ 17,02,774/- ಎಂದು ಯಾವ ಆಧಾರದ ಮೇಲೆ ನಮೂದಿಸಿರುತ್ತೀರಿ ಎಂದರೆ ಪಾಲಿಸಿ ಹೋಲ್ಡರ್ ರವರ ದೂರಿನನ್ವಯ ಮಾಡಿದ ಪ್ರಾಥಮಿಕ ತನಿಖೆಯ ಮೇಲೆ ನಮೂದಿಸಿದ್ದೇವೆ

ಎಂದು ನುಡಿಯುತ್ತಾರೆ. ನಮ್ಮ ಕಚೇರಿಯವರು ಕಚೇರಿಯಲ್ಲಿ ಲಭ್ಯವಿರುವ ದಾಖಲೆಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ ಸಂಪೂರ್ಣ ತನಿಖೆಯನ್ನು ಮಾಡಿದ ನಂತರ 7 ಲಕ್ಷ ಚಿಲ್ಲರೆ ಹಣ ದುರುಪಯೋಗ ಆದ ಬಗ್ಗೆ ತಿಳಿದಿರುತ್ತದೆ. ನಿಪಿ.1 ನ್ನು ನಾನು ಚಾಸಾ.4 ರವರ ಮುಾಲಕ ಠಾಣೆಗೆ ಸಲ್ಲಿಸುವ ಪೂರ್ವದಲ್ಲಿ ನಮ್ಮ ಕಚೇರಿಯಲ್ಲಿ ಲಭ್ಯವಿದ್ದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ್ದೇನೆ ಎಂದರೆ ಸರಿ. ನಮ್ಮ ಕಚೇರಿಯಲ್ಲಿ ಈ ಪ್ರಕರಣದ ಪಾಲಿಸಿಗೆ ಸಂಬಂದಿಸಿದ ಹಣವನ್ನು ಪಾವತಿ ಹೊಂದಿರುವ ಬಗ್ಗೆ ಇರುವ ದಾಖಲೆಗಳು ನಮ್ಮ ಕಚೇರಿಯ ಸಾಫ್ಟವೇರ್ ನಲ್ಲಿ ಇದ್ದು ಅದನ್ನು ಆನ್ ಲೈನ್ ಮೂಲಕ ನಿರ್ವಹಣೆ ಮಾಡುತ್ತೇವೆ ಎಂದರೆ ಸರಿ. ನಮ್ಮ ಸಂಸ್ಥೆಯ ಅಕೌಂಟ್ ವ್ಯವಹಾರ ನಮ್ಮ ಕಂಪನಿಯ ಆನ್ ಲೈನ್ ಸಾಪ್ಟವೇರ್ ಮೂಲಕ ಆಗುತ್ತವೆ ಎಂದರೆ ಸರಿ. ಸದರಿ ಸಾಪ್ಟವೇರ್ ಯಾವುದು ಎಂದು ನನಗೆ ನೆನಪಿಲ್ಲ. ಸಾಪ್ಟವೇರ್ ಕರಪ್ಷನ್ ಆಗುವ ಸಾಧ್ಯತೆಯೂ ಇದೆ ಎಂದರೆ ಸರಿ. ಸಾಪ್ಟವೇರ್ ಕರಪ್ಷನ್ ನಿಂದಲೇ ನಮ್ಮ 17 ಲಕ್ಷ ರೂಗಳ ಲೆಕ್ಕಾಚಾರ 7 ಲಕ್ಷ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸರ್ಕಾರದ ನಿರ್ದೇಶನದ ಮೇರೆಗೆ............. ದೂರನ್ನು ದಾಖಲು ಮಾಡಿದ್ದೇನೆ ಎಂದು ಹೇಳಿದ್ದು, ಅದನ್ನು ನಿಪಿ.1 ರಲ್ಲಿ ಹೇಳಿಲ್ಲ ಎಂದರೆ ಸರಿ. ಆರೋಪಿ ಪಾಲಿಸಿ ಹೋಲ್ಡರ್ ರವರಿಂದ ಪಡೆದ ಹಣವನ್ನು ದುರುಪಯೋಗ ಮಾಡಿಲ್ಲ ಎಂದರೆ ಸಾಕ್ಷಿಯು ಅದನ್ನು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಯಾವುದೇ ಪಾಲಿಸಿ ಹೋಲ್ಡರ್ ನಿಂದ ನೇರವಾಗಿ ತಾನೇ ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತನ್ನ ವ್ಯಕ್ತಿಗಳ ಮುಖಾಂತರ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯ ಆರೋಪಿ ಲಿಂಗರಾಜು ರವರನ್ನು ಮೈಕ್ರೋ ಇನ್ಸೂರೆನ್ಸ ಏಜೆಂಟರಾಗಿ ನೇಮಕ ಮಾಡಿಲ್ಲ ಎಂದರೆ ಸಾಕ್ಷಿಯು ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಏಜೆಂಟರಾಗಿ ನೇಮಕ ಮಾಡಿದ್ದು ಆರೋಪಿ ಸದರಿ ಸಂಸ್ಥೆಯ ಏಜೆಂಟ್ ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯ ಆರೋಪಿ ಲಿಂಗರಾಜು ರವರನ್ನು ಮೈಕ್ರೋ ಇನ್ಸೂರೆನ್ಸ ಏಜೆಂಟರಾಗಿ ನೇಮಕ ಮಾಡಿಲ್ಲ ಎಂದರೆ ಸಾಕ್ಷಿಯು ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಏಜೆಂಟರಾಗಿ ನೇಮಕ ಮಾಡಿದ ಬಗ್ಗೆ ದಾಖಲೆಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಆರೋಪಿಯಿಂದ ಯಾವುದೇ ಹಣದ ದುರುಪಯೇಗ ಆಗಿಲ್ಲ ಎಂದರೆ ಸರಿಯಲ್ಲ.

ಆರೋಪಿ ಲಿಂಗರಾಜ ಎಲ್ ಐ ಸಿ ಮೈಕ್ರೋ ಏಜೆನ್ಸಿ ಏಜೆಂಟರಲ್ಲ ಎಂದರೆ ಸರಿಯಲ್ಲ. ಸದರಿ ಲಿಂಗರಾಜ ನಿರ್ದಿಷ್ಟ ವ್ಯಕ್ತಿಗಳನ್ನು ನೇಮಕ ಮಾಡಿಕೊಂಡು ಹಣವನ್ನು ಸಂದಾಯ ಮಾಡಿಸಿಕೊಳ್ಳುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಲಿಂಗರಾಜರವರ ವಿರುದ್ಧ 12 ವ್ಯಕ್ತಿಗಳು ದೂರು ನೀಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಇಲಾಖೆಗೆ ಪಾವತಿಸಿದ ಹಣವನ್ನು ತಮ್ಮ ಸ್ವಂತ ಉಪಯೋಗಕ್ಕೆ

ವಿನಿಯೋಗ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ನಾವು ಠಾಣೆಗೆ ದೂರು ಸಲ್ಲಿಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಬೇರೆಯವರು ಮಾಡಿದ ತಪ್ಪನ್ನು ಆರೋಪಿಯ ಮೇಲೆ ಹೊರಿಸಿ ಪೊಲಿಸರಿಗೆ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದುರುಪಯೋಗ ಆದ ಹಣಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಹಣ ದುರುಪಯೋಗ ಆಗಿದ್ದರೆ ನಾವು ಭೂಮಿಕಾ ಏಜ್ಯುಕೇಶನ್ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ವಸೂಲಿ ಮಾಡಬೇಕೆ ವಿನಃ, ಒಬ್ಬ ವೈಯಕ್ತಿಕ ವ್ಯಕ್ತಿಯ ವಿರುದ್ಧ ಈ ರೀತಿ ಪ್ರಕರಣ ದಾಖಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ